## ಜೆಎಸ್‌ಎಸ್ ಮಹಾವಿದ್ಯಾಪೀಠ
## ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನವಾರಿಧಿ–53

### ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**6 ಡಿಸೆಂಬರ್ 2021 * ಸೋಮವಾರ * ಸಂಜೆ 6.00**

### ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

### ಉಪನ್ಯಾಸ



**ಪ್ರೊ. ಸಿದ್ದು ಯಾಪಲಪರವಿ**
ಪ್ರಾಂಶುಪಾಲರು
ಕೆವಿಎಸ್‌ಆರ್ ಪದವಿಪೂರ್ವ ಕಾಲೇಜು, ಗದಗ

**ವಿಷಯ : ಒತ್ತಡ ನಿರ್ವಹಣೆಯ ಜೀವನ ಶೈಲಿ**

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

**ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ**

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಪ್ರೊ. ಸಿದ್ದು ಯಾಪಲಪರವಿಯವರು** ಇಂಗ್ಲಿಷ್ ಉಪನ್ಯಾಸಕರು. ಕೊಪ್ಪಳ ಜಿಲ್ಲೆಯ ಕಾರಟಗಿ ಜನ್ಮಸ್ಥಳ. ಅಲ್ಲಿಯೇ ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿಎ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಧಾರವಾಡದಲ್ಲಿನ ಸಾಹಿತಿಗಳ ಒಡನಾಟ ಮತ್ತು ಸಾಹಿತ್ಯದ ಅಧ್ಯಯನದಿಂದ ಉತ್ತಮ ಬರಹಗಾರರಾಗಿ ರೂಪುಗೊಂಡರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವರು. ಪ್ರಸ್ತುತ ಗದಗಿನ ಕನಕದಾಸ ಶಿಕ್ಷಣ ಸಮಿತಿಯ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾರೆ. ಸಾಹಿತ್ಯ ವಿಮರ್ಶೆ ಮತ್ತು ಕಾವ್ಯದಲ್ಲಿ ವಿಶೇಷ ಆಸಕ್ತಿ. ನೆಲದ ಮರೆಯ ನಿಧಾನ, ಎತ್ತಣ ಮಾಮರ ಎತ್ತಣ ಕೋಗಿಲೆ, ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಜೀವನ ಚರಿತ್ರೆ, ಹಗಲಿನಲ್ಲಿಯೆ ಸಂಜೆಯಾಯಿತು ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ತರಬೇತಿಗಳನ್ನು ನೀಡುತ್ತಿದ್ದಾರೆ. ಸಾಮಾಜಿಕ ಜಾಲತಾಣವನ್ನು ಸಮರ್ಥವಾಗಿ ಬಳಸಿಕೊಂಡು ಬ್ಲಾಗ್ ಮೂಲಕ ಕವಿತೆ, ಕತೆ ಹಾಗೂ ಖಾಸಗಿ ಅಭಿವ್ಯಕ್ತಿಯ ಸಾವಿರಾರು ಬರಹಗಳನ್ನು ಪ್ರಕಟಿಸಿ ಕನ್ನಡಿಗರು ಮತ್ತು ಅನಿವಾಸಿ ಕನ್ನಡಿಗರಿಂದ ಮುಕ್ತ ಪ್ರಸಂಶೆ ಪಡೆದಿರುವರು. ವಿಕ್ರಾಂತ ಕರ್ನಾಟಕ ವಾರಪತ್ರಿಕೆಯಲ್ಲಿ ರಾಜಕೀಯ, ಸಾಮಾಜಿಕ ಅಂಕಣ ಹಾಗೂ ವಿದೇಶ ಪ್ರವಾಸಾನುಭವದ ಬರಹಗಳು ಪ್ರಕಟವಾಗಿವೆ. ಚಂದನ ವಾಹಿನಿಯಲ್ಲಿ ಬೆಳಗು ಮತ್ತು ಶುಭೋದಯ ಕರ್ನಾಟಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂದರ್ಶನ ನೀಡಿದ್ದಾರೆ. ಶ್ರೀ ಬಸವ ಟಿವಿ ವಾಹಿನಿಯಲ್ಲಿ ಅನುಭಾವ ಗೋಷ್ಠಿ ಮತ್ತು ವಚನಮಾರ್ಗ ಚಿಂತನ ಮಾಲಿಕೆಗಳನ್ನು ನಡೆಸಿಕೊಟ್ಟಿದ್ದಾರೆ. ವಿವಿಧ ಮಠಗಳು ಹಾಗೂ ಗಣ್ಯರ ಸಾಕ್ಷ್ಯಚಿತ್ರಗಳನ್ನು ನಿರ್ಮಾಣ ಮಾಡಿರುವರು.

ಸೆನ್ಸಸ್ ರಾಷ್ಟ್ರೀಯ ಪ್ರಶಸ್ತಿ ಮತ್ತು ಬೆಳ್ಳಿ ಪದಕ, ಆಜೂರ ಪುರಸ್ಕಾರ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ಜ್ಞಾನವಾರಿಧಿ–54 * 13 ಡಿಸೆಂಬರ್ 2021**

**ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು**

ಶ್ರೀ ಹಿರೇಮಠ
ತುಮಕೂರು

ವಿಷಯ : ಸಂಸ್ಕೃತ ಸುಭಾಷಿತಗಳಲ್ಲಿ ವಿಧಿ–ನಿಷೇಧಗಳು

**ಜ್ಞಾನವಾರಿಧಿ–55 * 20 ಡಿಸೆಂಬರ್ 2021**

**ಕರ್ನಲ್ ಶ್ರೀ ಚೇತನ್ ನಂದೀಶ್ ಕಲಾಂಬರ್**

ನಿವೃತ್ತ ಸೇನಾಧಿಕಾರಿಗಳು
ಮೈಸೂರು

ವಿಷಯ : ಜೀವನದಲ್ಲಿ ಅತ್ಯುತ್ತಮ ಸಾಧನೆಯ ಸಿದ್ಧತೆ